ಶ್ರೀ ಡಿ. ದೇವರಾಜ ಅರಸ್.— ಆಪ್ರೂವ್ಡ್ ಕ್ವಾರಿಯಲ್ಲಿ ಕಲ್ಲು ಸಿಕ್ಕದೆ ಇನ್ನೊಂದರ ಕಡೆಯಿಂದ ತೆಗೆದುಕೊಂಡು ಬಂದಿದ್ದರಿಂದ ಹೆಚ್ಚು ಹಣ ಕೊಡಬೇಕಾಯಿತು.

ಶ್ರೀ ಎಚ್. ಡಿ. ದೇವೇಗೌಡ.— ಆಪ್ರೂವ್ ಕ್ವಾರಿಯಲ್ಲಿ ಮೆಟೀರಿಯಲ್ ಸಿಕ್ಕಲಿಲ್ಲ ಎಷ್ಟು ಶಕ್ಯಂಥಾದ್ದಕ್ಕೆ Is there any report to that effect by the departmental officers ?

SRI D. DEVARAJ URS.—Yes.

PRIMARY AND SECONDARY SCHOOL BUILDINGS OF YELBURGA TALUK

715. SRI PRABHURAJ PATIL (Yelburga).—Will the Minister of State for Primary and Secondary Education be pleased to state.—

(*a*) the number of primary and secondary schools in Yelburga Taluk of Raichur District ;

(*b*) the number of schools which have been provided with buildings and out of them the number of buildings which are incomplete;

(*c*) the steps taken by Government to provide buildings for the remaining schools :

(*d*) whether the Government intends to complete the incomplete buildings early ; if so, wit in what period ?

SMT. E. E. VAZ.—(Minister of State for Primary and Secondary Education).—

	Primary Schools	*Secondary Schools*	*Total*
(*a*)	90	45	135
(*b*)		78	
		8	

(*c*) Such buildings are constructed where the members of School Development Committee and the public come forward to pay their share of contribution which is required to be paid.

(*b*) The Taluk Development Board and P. W. D. have been instructed to complete the construction of buildings as early as possible.

ಶ್ರೀ ಪ್ರಭುರಾಜ್ ಪಾಟೀಲ್.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ೮ ಶಾಲೆಗಳ ಕಟ್ಟಡಗಳು ಅರ್ಧಂಬರ್ಧ ಆಗಿವೆ ಎಂದು ಹೇಳಿದ್ದೀರಿ, ಆ ಕಟ್ಟಡಗಳ ಹೆಸರು ಯಾವುವು ಎಂಬುದನ್ನು ಹೇಳುತ್ತೀರಾ ?

† ಶ್ರೀಮತಿ ಇ. ಇ ವಾಜ್.—ಈಗಾಗಲೇ ೭೮ ಶಾಲೆಗಳ ಕಟ್ಟಡವನ್ನು ಪೂರೈಸಿದ್ದೇವೆ. ಇನ್ನು ಉಳಿದ ೮ ಶಾಲೆಗಳ ಕಟ್ಟಡಗಳನ್ನು ಈಗ ಕಟ್ಟಿಸ್ತಿದ್ದೇವೆ. ಆ ಶಾಲೆಗಳು ಯಾವುವು ಎಂದರೆ ಬಾನಾಪುರ, ಕನ್ನಸಂದ್ರ, ಬಿಕ್ಕಮ್ಮೈನೇರಾ, ಮಂರುಡಿ, ಬೇವೂರು, ವನಕೋಲ ಕೆಂಟಿ ಮಾಟವೇಡಿನ್ನಿ, ಕಾಳ್ಕರೆ.

ಶ್ರೀ ಪ್ರಭೂರಾಜ್ ಪಾಟೀಲ್.—ಎಷ್ಟು ದಿವಸಗಳಲ್ಲಿ ಆ ಶಾಲಾಕಟ್ಟಡಗಳನ್ನು ಪೂರೈಸುತ್ತೀರಿ ?

ಶ್ರೀಮತಿ ಇ.ಇ. ವಾಜ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಒಂದೊಂದು ಕಟ್ಟಡಕ್ಕೆ ೭ ೧/೨ ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ, ಅದಕ್ಕೆ ಸರ್ಕಾರದವರು ೨ ೧/೨ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ತಾಲ್ಲೂಕು ಬೋರ್ಡಿನವರು ೨ ೧/೨ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಉಳಿದ ೨ ೧/೨ ಸಾವಿರ ರೂಪಾಯಿಗಳನ್ನು ಸಾರ್ವಜನಿಕರ ಚಂದಾದ ಮೂಲಕ ಕೊಡಬೇಕಾಗುತ್ತದೆ. ಸರ್ಕಾರದ ವತಿಯಿಂದ ಕೊಡಬೇಕಾದ ಹಣವನ್ನು ಕೊಟ್ಟಿದೆ. ತಾಲ್ಲೂಕು ಬೋರ್ಡಿನವರು ೨ ೧/೨ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ, ಸಾರ್ವಜನಿಕರಿಂದ ಬರಬೇಕಾದ ೨ ೧/೨ ಸಾವಿರ ರೂಪಾಯಿ ಸಾರ್ವಜನಿಕ ಕಾಂಟ್ರಿಬ್ಯೂಷನ್ ಬರುತ್ತಿಲ್ಲ. ಅದಕ್ಕೋಸ್ಕರ ಕಲಹಾ ಮಂಡಲಿಯವರಿಗೆ ಒತ್ತಾಯ ಮಾಡಬೇಕೆಂದು ಡೆಪ್ಯೂಟಿ ಕಮಿಷನರಿಗೆ ಆದೇಶ ಕೊಟ್ಟಿದೆ, ಅವರು ಪ್ರಯತ್ನ ಮಾಡಿ ಸಾರ್ವಜನಿಕರಿಂದ ಕಾಂಟ್ರಿಬ್ಯೂಷನ್ ವಸೂಲು ಮಾಡಿ ಆ ಕಟ್ಟಡಗಳನ್ನು ಪೂರೈಸುತ್ತೇವೆ.

ಶ್ರೀ ಪ್ರಭುರಾಜ್ ಪಾಟೀಲ್.—ಈ ಶಾಲಾಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದು ಯಾವಾಗ ?

ಶ್ರೀಮತಿ ಇ. ಇ. ವಾಜ್.—ಒಂದೊಂದು ಶಾಲೆಯನ್ನು ಯಾವಾಗ ಪ್ರಾರಂಭ ಮಾಡಿದ್ದಾರೆ ಎಷ್ಟನೆಯ ತಾರೀಖಿನಲ್ಲಿ ಪ್ರಾರಂಭವಾಯಿತು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇನ್ನೊಂದು ಪ್ರಶ್ನೆಯನ್ನು ಕೇಳಿದರೆ ಪೂರ್ತಿ ತಾರೀಖಿನ ಗಳನ್ನು ಕೊಡಬಹುದು.

ಶ್ರೀ ಪ್ರಭುರಾಜ್ ಪಾಟೀಲ್.—ನನಗೆ ಗೊತ್ತಿರುವ ಹಾಗೆ ೧೯೫೬ನೇ ಇಸವಿಯಲ್ಲಿ ಈ ಶಾಲೆಗಳ ಕಟ್ಟಡಗಳನ್ನು ಪ್ರಾರಂಭ ಮಾಡಿದರು. ಆಲ್ಲಿ ಸಾರ್ವಜನಿಕರಿಂದ ವಂತಿಕೆ ಬಂದಿಲ್ಲ ಎಂದು ಅರ್ಥವಾಗುತ್ತದೆ. ಆಲ್ಲಿ ಕೇವಲ ಬಡವರು ಇದಾರೆ. ಆದ್ದರಿಂದ ಅಲ್ಲಿ ಸಾರ್ವಜನಿಕರ ವಂತಿಕೆ ಬಂದಿಲ್ಲ. ಆದ್ದರಿಂದ ಸರ್ಕಾರದವರೇ ಆ ಶಾಲಾ ಕಟ್ಟಡಗಳನ್ನು ಪೂರ್ತಿ ಕಟ್ಟಿಸಿ ಕೊಡುತ್ತೀರಾ ?

ಶ್ರೀಮತಿ ಇ. ಇ ವಾಜ್.—ಅರ್ಧಂಬರ್ಧ ಆಗಿರುವ ಕಟ್ಟಡಗಳನ್ನು ಆದಷ್ಟು ಜಾಗ್ರತೆ ಕಟ್ಟಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ. ಇದರ ಜೊತೆಗೆ ಹಿಂದುಳಿದ ಊರುಗಳಲ್ಲಿ ಯಾವ ಯಾವ ಕಡೆ ಕಟ್ಟಡಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ ಎಂದು ಗೊತ್ತಾಗುತ್ತದೆಯೋ ಅಂಥಾ ಕಡೆ ಸರಕಾರದ ವತಿಯಿಂದ ಕಟ್ಟಡವನ್ನು ಕಟ್ಟಿಸಿಕೊಡುವ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಎಂ. ಬಿ. ರಾಮಸಾ ಮಿ.—(ಅ) ಪ್ರಶ್ನೆಗೆ ಉತ್ತರವಾಗಿ ೮ ಶಾಲೆಗಳ ಕಟ್ಟಡ ಪೂರ್ತಿಯಾಗಿಲ್ಲ ಎಂದು ಹೇಳಿದ್ದೀರಿ. ಈ ಶಾಲೆಗಳಿಗೆ ಸಂಬಂಧಪಟ್ಟಹಾಗೆ ಎಷ್ಟು ಜನ ಸಾರ್ವಜನಿಕರು ಕಾಂಟ್ರಿಬ್ಯೂಷನ್ ಕೊಟ್ಟಿದ್ದಾರೆ, ಒಂದುವೇಳೆ ಉಳಿದವರು ಕಾಂಟ್ರಿಬ್ಯೂಷನ್ ಕೊಡದೇ ಇದ್ದರೆ ಆ ಶಾಲೆಗಳ ಕಟ್ಟಡವನ್ನು ಕಟ್ಟುವುದನ್ನು ಸರ್ಕಾರದವರು ಕೈ ಬಿಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಅವರು ಪೂರೈಸದಿದ್ದರೆ ಸರ್ಕಾರದವರೇ ಆ ಕಟ್ಟಡಗಳನ್ನು ಪೂರೈಸ ಬೇಕಾಗುತ್ತದೆ.

ಶ್ರೀ ಪ್ರಭುರಾಜ್ ಪಾಟೀಲ್.—ಒಂದು ವೇಳೆ ಸಾರ್ವಜನಿಕ ವಂತಿಕೆ ಬಾರದಿದ್ದರೆ ಅಂಥಾ ಕಡೆ ಸರ್ಕಾರದವರೇ ಸಂಪೂರ್ಣವಾಗಿ ಶಾಲಾ ಕಟ್ಟಡಗನ್ನು ಕಟ್ಟಿಸಿಕೊಡುವ ಧೋರಣೆ ಇದೆಯೇ ?

ಶ್ರೀಮತಿ ಇ. ಇ. ವಾಜ್.—ಸರ್ಕಾರದವರೂ ಪ್ರತಿವರ್ಷ ನೂರಾರು ಶಾಲೆಗಳ ಕಟ್ಟಡಗಳನ್ನು ಕಟ್ಟಿಸಿಕೊಡಬೇಕಾಗುತ್ತದೆ. ಒಟ್ಟು ಸಮಸ್ಯೆ ದೇಶದಲ್ಲಿ ೩೨ ೧/೨ ಸಾವಿರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಇವೆ. ಎಲ್ಲಾ ಕಟ್ಟಡಗಳಿಗೂ ಸರ್ಕಾರದವರೇ ಪೂರ್ತಿ ಹಣವನ್ನು ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಸುವುದು ಕಷ್ಟವಾಗುತ್ತದೆ. ಸಾರ್ವಜನಿಕರು ತಮ್ಮ ಊರಿನಲ್ಲಿ ಒಂದು ಶಾಲೆಯಾಗಬೇಕು ಎಂದರೆ ಸ್ವಲ್ಪ ತ್ಯಾಗ ಮಾಡಿ ಸ್ವಲ್ಪ ಹಣವನ್ನು ಕೊಡಬೇಕಾಗುತ್ತದೆ.

UPGRADING OF PRIMARY HEALTH UNIT AT KOPPA

725 SRI A. D. BILIGOWDA (Maddur).— Will the Minister for Health be pleased to state.—